ತಮ್ಮಂತಿರುವುದು ಸಹಜ, ಸಾಮಾನ್ಯ. ಆದರೆ, ಶ್ರೀಪಾದನೇಕೆ ಹೀಗೆ? ಅವನಿಗೆ ಯಾವತ್ತೂ ಯಾವ ಸಂಗತಿಗಳ ಮೇಲೂ ಅಸಮಾಧಾನ ಆಗುವುದಿಲ್ಲವೇ? ಮೈ ಪರಚಿಕೊಳ್ಳುವಂತಾಗಬೇಕಿರಲಿಲ್ಲ ಪ್ರಭಾವತಿಗೆ. ಆದರೆ, ಹಾಗಾಗುತ್ತಿತ್ತು. ಅಸಹನೆಯಿಂದ ಕುದಿಯುವಂತಾಗುತ್ತಿತ್ತು. ಈ ಸಿಟ್ಟು ಮಗನ ಚೇಷ್ಟೆಗಳ ಮೇಲೆ ಸಿಡುಕಾಗಿ ಪ್ರಕಟವಾದರೆ, ಹೊಡೆತದಲ್ಲಿ ಪರ್ಯವಸಾನವಾದರೆ ಕವಳ ತುಂಬಿದ ಬಾಯನ್ನು ಪಿಟ್ಟೆಂದು ಒಡೆಯದೆ ಮಗನನ್ನು ಹೆಗಲ ಮೇಲೆ ಹೊತ್ತುಕೊಂಡು ಅಂಗಳ ದಾಟಿ ತೋಟದ ತಗ್ಗಿಗಿಳಿದುಬಿಡುತ್ತಿದ್ದ ಶ್ರೀಪಾದ. ತೀರಾ ಸಹನೆ ಮೀರಿದರೆ ಕವಳದ ತಟ್ಟೆಯನ್ನು ಎಡಗಾಲಿಂದ ಒದ್ದು ಮುನಿಸು ತೀರಿಸಿಕೊಳ್ಳುತ್ತಿದ್ದಳು ಪ್ರಭಾವತಿ.

ಶೀನಿ ಮಾವ ನೋಡಲು ಆಕರ್ಷಕನಾಗಿದ್ದಾನೆ. ಬಾಯ್ತುಂಬಾ ಹರಟುತ್ತಾನೆ. ನಾದಿನಿಯ ಮನೆಗೆ ಬಂದರೆ ಅವಳ ಕೆಲಸಕಾರ್ಯಗಳಲ್ಲಿ ಸಹಾಯಹಸ್ತ ಚಾಚುತ್ತಾನೆ. 'ಕಾಯಿ ತುರಿದುಕೊಡ್ಲಾ?' 'ತರಕಾರಿ ಹೆಚ್ಚಿಕೊಡ್ಲಾ?' 'ಬಾಳೆಕಾಯಿ ಹೆಚ್ಚಿಕೊಡ್ತೀನಿ, ಬುರುಬುರಿ ಮಾಡೇ. ಉಪ್ಪು, ಖಾರಕ್ಕೆ ಚೂರು ಇಂಗು ಸೇರಿಸು' ಎನ್ನುವ ವರೆಗೆ ಏನೋ ಒಂದು ಕೆಲಸಕಾರ್ಯ ಅಂಟಿಸಿಕೊಳ್ಳುತ್ತಾನೆ. 'ಅಡುಗೆಮನೆ ಅಂದರೆ ಹೆಂಗಸರ ಸಾಮ್ರಾಜ್ಯ' ಎಂದು ನಂಬಿಕೊಂಡ ಶ್ರೀಪಾದನಿಗೆ ಇಂತಹ ಚರ್ಯೆಗಳು ಅಚ್ಚರಿ ಹುಟ್ಟಿಸುವುದು ಮಾತ್ರವಲ್ಲ, ಅಸೂಯೆಗೂ ಕಾರಣವಾಗುತ್ತವೆ ಎಂದು ಅರಿವಾದಾಗ ಪ್ರಭಾವತಿ ಯಾಕೆ ಪುಳಕಗೊಂಡಳು? ಬಂಡೆ ಮೆದುವಾಗುತ್ತಿದೆ ಎಂದು ಖುಷಿಯಾದಳು? ಹೇಗಾದರೂ ಗಂಡನನ್ನು ಅವಳು ನಂಬಿಕೊಂಡಂತಹ ಮನುಷ್ಯಸಹಜ ಸ್ವಭಾವಕ್ಕೆ ತರಲು ಪಣ ತೊಟ್ಟಿದ್ದಳೇ? ಅವನಲ್ಲಿ ಕಿಂಚಿತ್ತಾದರೂ ಸಂಚಲನೆ ಮೂಡಿಸಲು? ಶ್ರೀಪಾದ ಭಾವನೆಗಳಿಲ್ಲದ ಶುಷ್ಕ ವ್ಯಕ್ತಿ ಎಂದು ಅವಳು ಅಂದಾಜಿಸಿದ್ದು ಪೂರ್ತಿ ಸರಿಯಾಗಿದ್ದಾಗಿರಲಿಲ್ಲ. ಶೀನಿ ಮಾವ ಮನೆಗೆ ಬಂದನೆಂದರೆ ಶ್ರೀಪಾದನಿಗೆ ಅಪಥ್ಯ, ಕಿರಿ ಕಿರಿ ಎಂದು ಅರ್ಥೈಸಿಕೊಂಡುಬಿಟ್ಟಳು ಚದುರೆ. ಆಗಲಿ, ಇದನ್ನಾದರೂ ಅವನು ಬಾಯ್ಬಿಟ್ಟು ಹೇಳಲಿ. ಈ ಕಾರಣದಿಂದಲಾದರೂ ಕಾಲು ಕೆರೆದುಕೊಂಡು ಜಗಳಕ್ಕೆ ಬರಲಿ. ಮನೆಯಲ್ಲಿ ಒಮ್ಮೆಯಾದರೂ ಏರು ದನಿ ಕೇಳಿಸಲಿ ಎಂದು ಯಾವ ಹೆಣ್ಣಾದರೂ, ಗೃಹಿಣಿಯಾದರೂ ಹಾತೊರೆಯುತ್ತಾಳಾ? ಆದರೆ, ಪ್ರಭಾವತಿಗೆ ಹೀಗನಿಸತೊಡಗಿದ್ದು ಸತ್ಯ. ಮನೆಯೊಡತಿಯ ದೊಡ್ಡ ಗಂಟಲಿನ ಮಾತುಕತೆ, ವಿನಾಕಾರಣದ ಸಿಟ್ಟು ಸೆಡವುಗಳಿಲ್ಲದಿದ್ದರೆ ಸದಾ ತಣ್ಣಗೆ ನಿದ್ದೆ ಮಂಪರಿನಲ್ಲಿದ್ದಂತಿರುತ್ತಿದ್ದ ಮನೆಯಲ್ಲಿ ಶೀನಿ ಮಾವನ ಕಾರಣದಿಂದ ಬಿಸಿಯೇರಬಹುದೆಂದು ಪ್ರಭಾವತಿ ಭ್ರಮಿಸಿದ್ದು ಸುಳ್ಳಾಯ್ತು. ಈ ಶೀನಿ ಮಾವನಾದರೋ ದಪ್ಪ ಚರ್ಮದವನು. ಸೂಕ್ಷ್ಮ ಗೊತ್ತಾಗದವನು. ತನ್ನೂರಿಗೆ ಹತ್ತಿರ ಎಂದೇ ಈ ಊರಿನ ಗಂಡನ್ನು ಆಯ್ಕೆ ಮಾಡಲು ನಾದಿನಿಗೆ ಒತ್ತಾಯಿಸಿದನೆಂದು ಒಮ್ಮೊಮ್ಮೆ ಅನಿಸಿದ್ದುಂಟು ಪ್ರಭಾವತಿಗೆ. ನೆನೆಸಿಕೊಂಡಾಗ ಬಂದು ಹೋಗಿ ಮಾಡಲು ಹತ್ತಿರದ ಒಂದು ನೆಂಟರ ಮನೆ? ತನ್ನ ಅಕ್ಕ ಜೊತೆಗೆ ಬರುತ್ತಿದ್ದರೆ ಏನೆನಿಸುತ್ತಿರಲಿಲ್ಲವೇನೋ ಶ್ರೀಪಾದನಿಗೆ. ಆದರೆ, ಅಕ್ಕನಿಗೆ ಮನೆ ಬಿಟ್ಟು ಬರಲು ಹತ್ತು ಅಡ್ಡಿ. ಸ್ಕೂಲಿಗೆ ಹೋಗುವ ಮಕ್ಕಳು, ಕೊಟ್ಟಿಗೆಯಲ್ಲಿರುವ ದನಕರುಗಳು, ವಯಸ್ಸಾದ ಅತ್ತೆ, ಮಾವ, ಅಪರೂಪಕ್ಕೆ ತಂಗಿಯ ಮನೆಗೆ ಬರಬೇಕಾದರೂ ಅವಳು 'ಕೆಸಿನ ದಡಿಗೆ ಕರು ಕಟ್ಟಿ ಹಾಕಿ ಬಂದವಳಂತೆ' ಅವಸರದಲ್ಲಿರುತ್ತಿದ್ದಳು. ಕೆಲವು ಗಂಡಸರೇಕೆ ಶೀನಿ ಮಾವನ ಥರ ತಿರುಪಾಟಿಗಳಾಗಿರುತ್ತಾರೆ? ಮನೆಯಲ್ಲೇಕೆ ಅವರಿಗೆ ಕಾಲು ನಿಲ್ಲುವುದಿಲ್ಲ? ಜವಾಬ್ದಾರಿಗಳ ಕಡೆ ಗಮನ ಇರುವುದಿಲ್ಲ? 'ಹೆಂಡತಿ ನೋಡಿಕೊಳ್ಳುತ್ತಾಳೆ' ಎನ್ನುವ ಉಡಾಫೆ? ಮನೆ ಬಿಟ್ಟು ಅಲುಗದ ಪ್ರವೃತ್ತಿಯ ಶ್ರೀಪಾದ ಹೀಗೇನಾದರೂ ಇದ್ದಿದ್ದರೆ ತಾನು ಸೈಸಿಕೊಳ್ಳುತ್ತಿದ್ದೆನೇ ಎಂದು ಪ್ರಶ್ನೆ ಕೇಳಿಕೊಂಡರೆ ನಕಾರಾತ್ಮಕ ಉತ್ತರ ಪ್ರಭಾವತಿಯ ತಲೆಯಲ್ಲಿ ಸುಳಿದು ಹೋಗುತ್ತಿತ್ತು. 'ಮನೆಗೆ ಸೇರಿಸ್ಬೇಡ ಕಣೇ. ನೀನು ರುಚಿರುಚಿಯಾಗಿ ಮಾಡಿ ಹಾಕ್ತಿ. ಕಾಲು ತುರಿಕೆ ಶುರುವಾಯ್ತೂಂದ್ರೆ ಓಡಿ ಬರ್ತಾರೆ' ಮಾವನ ಎದುರೇ ಅವನ